KAVN400009022019

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ,

# ಹಡಗಲಿ

ಉಪಸ್ಥಿತಿ

**ಶ್ರೀಮತಿ.ಅಕ್ಷತಾ.ಟಿ**

ಬಿ.ಎ.ಎಲ್,ಎಲ್,ಬಿ. ಎಲ್.ಎಲ್.ಎಮ್,

**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳು, ಹಡಗಲಿ.**

**ತೀರ್ಪಿನ ದಿನಾಂಕಃ 24 ನೇ ಮಾರ್ಚ್ 2026**

## ಸಿ.ಸಿ.ನಂ.419/2019.

ಹಿರೇಹಡಗಲಿ ಪೋಲಿಸ್ ಠಾಣೆ,ಹಡಗಲಿ.

(ಸ ಸ ಅ ರವರು) ....ಪಿರ್ಯಾದುದಾರರು

- ವಿರುದ್ಧ -

ಸತೀಶ ಗುಜ್ಜಾರ,
ವಾಸಃ ಹೊಳಲು ಗ್ರಾಮ,ತಾ:ಹಡಗಲಿ,
ಜಿಃವಿಜಯನಗರ ಜಿಲ್ಲೆ.

ಆರೋಪಿ ಪರ ಶ್ರೀ.ಕೆ.ಕೆ.,ವಕೀಲರು) ....ಆರೋಪಿ

| | | |
|---|---|---|
| 1.ಅಪರಾಧ ನಡೆದ ದಿನಾಂಕ | : | 04.07.2017 |
| 2.ಅಪರಾಧ ವರದಿಯ ದಿನಾಂಕ | : | 07.02.2018 |
| 3.ಪ್ರಥಮ ಮಾಹಿತಿದಾರರ ಹೆಸರು | : | ರಾಮಣ್ಣನಾಯ್ಕು |
| 4.ಸಾಕ್ಷ್ಯವನ್ನು ಅಭಿಲೇಖಿಸುವ ಪ್ರಾರಂಭದ ದಿನಾಂಕ | : | 04.01.2022 |
| 5.ಸಾಕ್ಷ್ಯವನ್ನು ಅಭಿಲೇಖಿಸುವ ಕೊನೆಯ ದಿನಾಂಕ | : | 17.03.2026 |

**6.ಆರೋಪಿತನ** ವಿರುದ್ಧ ಮಾಡಲಾದ ಅಪಾದನೆಗಳು : ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ **32** ಮತ್ತು **34** ರಡಿಯಲ್ಲಿ

7. ನ್ಯಾಯಾಧೀಶರ ಅಭಿಪ್ರಾಯ : ದೋಷಾರೋಪಣೆ ಸಾಭೀತಾಗಿರುವುದಿಲ್ಲ.

# ತೀರ್ಪು

ಹಿರೇಹಡಗಲಿ ಪೋಲಿಸ್ ಠಾಣೆ, ಹಡಗಲಿ ಇವರು ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ **32** ಮತ್ತು 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಪ್ರಸ್ತುತ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**2)** <u>ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶಃ</u>-

ದಿನಾಂಕಃ **04-07-2017** ರಂದು ಸಂಜೆ **03-20** ಗಂಟೆ ಸುಮಾರಿಗೆ ಹಿರೇಹಡಗಲಿ ಪೊಲೀಸ್ ಠಾಣೆಯ ವ್ಯಾಪ್ತಿಯ ಹೊಳಲು ಗ್ರಾಮದಲ್ಲಿ ಗೋಣಿ ಬಸವೇಶ್ವರ ದೇವಸ್ಥಾನದ ಹತ್ತಿರ ಆರೋಪಿತನು ಸರ್ಕಾರದ ಅಧಿಕೃತ ಪರವಾನಿಗೆ ಇಲ್ಲದೆ ತನ್ನ ಸ್ವಂತ ಲಾಭಕ್ಕಾಗಿ ಸಂಗ್ರಹಣೆ ಮಾಡಿ ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಮಾರಾಟ ಮಾಡುತ್ತಿದ್ದಾಗ ಚಾಸಾ**11** ರವರು ತಮ್ಮ ಸಿಬ್ಬಂದಿಯವರಾದ **1** ರಿಂದ **5** ರವರೊಂದಿಗೆ ಶೋಧನ ಕಾರ್ಯ ನಡೆಸಿದಾಗ ಆರೋಪಿತನ ಹತ್ತಿರ ಒಂದು ರಟ್ಟಿನ ಡಬ್ಬದಲ್ಲಿ **"180"** ಮೀ.ಲೀ ನ **"KHODAYS XXX RUM** ಒಟ್ಟು **12** ಪೌಚ್‌ಗಳು ಹಾಗೂ **180'**ಮೀ.ಲಿ.ನ **No.1 Highway"** ಒಟ್ಟು **10** ಗಾಜಿನ ಬಾಟಲಿಗಳು ಸಿಕ್ಕಿರುತ್ತವೆ. ಇವುಗಳ ಒಟ್ಟು ಬೆಲೆ **1300.22/-**ರೂ ಆಗುತ್ತದೆ. ಹಾಗೂ ಆರೋಪಿತನ ಹತ್ತಿರ ಮದ್ಯಪಾನ ಮಾರಾಟ ಮಾಡಿದ ಹಣ ರೂ**1590/-** ರೂ ನಗದು ಹಣ ಸಿಕ್ಕಿದ್ದು. ಇವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಕಾಲಕ್ಕೆ ಜಪ್ತ ಪಡಿಸಿಕೊಂಡಿರುವದು ತನಿಖೆಯಿಂದ ಧೃಡಪಟ್ಟು. ಆರೋಪಿತನ ವಿರುದ್ಧ ಕರ್ನಾಟಕ

ಅಬಕಾರಿ ಕಾಯ್ದೆ ಕಲಂಃ32 ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವುದು ಅಪರಾಧವಾಗಿರುತ್ತದೆ.

3) ಚಾಸಾ.1 ರವರು ಸಲ್ಲಿಸಿದ ಪ್ರಥಮ ಮಾಹಿತಿಯ ಮೆರೆಗೆ ಹಿರೇಹಡಗಲಿ ಪೊಲೀಸ್ ಠಾಣೆ, ಹಡಗಲಿ ಗುನ್ನೆ ನಂಬರ.126/2017 ರಂತೆ ಪ್ರಕರಣರವನ್ನು ದಾಖಲಿಸಿಕೊಂಡಿರುತ್ತಾರೆ.

4) ಚಾಸಾ.11 ರವರು ತನಿಖೆಯನ್ನು ಪೂರೈಸಿ ದೊಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

5) ದೋಷಾರೋಪಣೆಯನ್ನು ಸಲ್ಲಿಸಿದ ನಂತರ, ಈ ನ್ಯಾಯಾಲಯದಿಂದ ಆರೋಪಿತನ ವಿರುದ್ದ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ನ್ಯಾಯಾಲಯದ ಆದೇಶ ಜಾರಿಯಾದ ಮೇಲೆ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿತನಿಗೆ ಕಲಂ. 207 ಸಿ.ಆರ್.ಪಿ.ಸಿ. ಪ್ರಕಾರ ದೋಷಾರೋಪಣೆಯ ಪ್ರತಿಯನ್ನು ನೀಡಲಾಯಿತು. ಕಲಂ.313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಆಲಿಸಲಾಯಿತು.

6) ಆರೋಪಿತನ ಮೇಲೆ ದೋಷಾರೋಪಣೆಯನ್ನು ಹೊರಿಸಲಾಗಿದ್ದು, ಆರೋಪಿತನು ತಪ್ಪು ಒಪ್ಪಿಕೊಳ್ಳದೆ ವಿಚಾರಣೆ ಆಗಲು ಕೇಳಿಕೊಂಡಿರುತ್ತಾರೆ. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಭೀತು ಪಡಿಸಲು ಫ್ರಾಸಾ.01 ರಿಂದ ಫ್ರಾಸಾ.5 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿ, ನಿಪಿ.01 ರಿಂದ 5 ಹಾಗೂ ಮುದ್ದೆ ಮಾಲು-1 ನೇದ್ದನ್ನು ಗುರುತಿಸಿಕೊಂಡಿರುತ್ತಾರೆ.

**7)** ಅಭಿಯೋಜನೆಯ ಮತ್ತು ಆರೋಪಿತನ ಪರ ವಕೀಲರ ವಾದ ವಿವಾದಗಳನ್ನು ಕೇಳಲಾಯಿತು. ಕಡತದಲ್ಲಿ ಲಭ್ಯವಿರುವ ದಾಖಲಾತಿಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ತಿರ್ಮಾನಕ್ಕಾಗಿ ಬಂದಿರುತ್ತವೆಃ

<u>ಅಂಶ ನಂ.1:</u> ದಿನಾಂಕಃ **04-07-2017** ರಂದು ಸಂಜೆ **03-20** ಗಂಟೆ ಸುಮಾರಿಗೆ ಹಿರೇಹಡಗಲಿ ಪೊಲೀಸ್ ಠಾಣೆಯ ವ್ಯಾಪ್ತಿಯ ಹೊಳಲು ಗ್ರಾಮದಲ್ಲಿ ಗೋಣಿ ಬಸವೇಶ್ವರ ದೇವಸ್ಥಾನದ ಹತ್ತಿರ ಆರೋಪಿತನು ಸಾರ್ವಜನಿಕ ಸ್ಥಳದಲ್ಲಿ ಕಾನೂನು ಬಹಿರವಾಗಿ ಅವನ ಸ್ವಂತ ಲಾಭಕ್ಕಾಗಿ ಸರಕಾರದ ಯಾವುದೇ ಅನುಮತಿ, ಪರವಾನಿಗೆ ಇಲ್ಲದೆ ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡಿ ಮತ್ತು ಅಕ್ರಮ ದಾಸ್ತನುಮಾಡಿ ಸಿಕ್ಕಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ **32** ಕೆ.ಇ. ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

<u>ಅಂಶ ನಂ.2:</u> ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನು ಯಾವುದೇ ಪರವಾನಿಗೆ ಪಡೆಯದೇ ಮದ್ಯ ಮಾರಾಟ ಮಾಡಿರುವುದು ಅನಧಿಕೃತ ಎಂದು ಗೊತ್ತಿದ್ದು ಅವುಗಳನ್ನು ಮಾರಾಟ ಮಾಡುತ್ತಿದ್ದಾಗ ಸಿಕ್ಕಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ **34** ಕೆ.ಇ. ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

ಅಂಶ ನಂ.3: ಆದೇಶ ಏನು ?

**8)** ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ *1:-* ನಕಾರಾತ್ಮಕ

ಅಂಶ *2:-* ನಕಾರಾತ್ಮಕ

ಅಂಶ *3:-* ಈ ಕೆಳಗಿನ ಕಾರಣಗಳಿಗಾಗಿ ಅಂತಿಮ ಆದೇಶದಂತೆ.

## ಕಾರಣಗಳು

**9)** **ಅಂಶ ನಂ-1 ಮತ್ತು 2:-** ಅಂಶ **1** ಮತ್ತು **2** ಇವುಗಳು ಒಂದೆ ರೀತಿಯ ಚರ್ಚೆಯ ವಿಷಯಗಳನ್ನು ಹೊಂದಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗಾಗಿ ತೆಗೆದುಕೊಳ್ಳಲಾಯಿತು. ಅಭಿಯೋಜನೆಯ ಪ್ರಕಾರ,

ದಿನಾಂಕಃ **04-07-2017** ರಂದು ಸಂಜೆ **03-20** ಗಂಟೆ ಸುಮಾರಿಗೆ ಹಿರೇಹಡಗಲಿ ಪೊಲೀಸ್ ಠಾಣೆಯ ವ್ಯಾಪ್ತಿಯ ಹೊಳಲು ಗ್ರಾಮದಲ್ಲಿ ಗೋಣಿ ಬಸವೇಶ್ವರ ದೇವಸ್ಥಾನದ ಹತ್ತಿರ ಆರೋಪಿತನು ಸರ್ಕಾರದ ಅಧಿಕೃತ ಪರವಾನಿಗೆ ಇಲ್ಲದೆ ತನ್ನ ಸ್ವಂತ ಲಾಭಕ್ಕಾಗಿ ಸಂಗ್ರಹಣೆ ಮಾಡಿ ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಮಾರಾಟ ಮಾಡುತ್ತಿದ್ದಾಗ ಚಾಸಾ**11** ರವರು ತಮ್ಮ ಸಿಬ್ಬಂದಿಯವರಾದ **1** ರಿಂದ **5** ರವರೊಂದಿಗೆ ಶೋಧನ ಕಾರ್ಯ ನಡೆಸಿದಾಗ ಆರೋಪಿತನ ಹತ್ತಿರ ಒಂದು ರಟ್ಟಿನ ಡಬ್ಬದಲ್ಲಿ **"180"** ಮೀ.ಲೀ ನ **"KHODAYS XXX RUM** ಒಟ್ಟು **12** ಪೌಚ್ಚಳು ಹಾಗೂ **180'**ಮೀ.ಲಿ.ನ **No.1 Highway"** ಒಟ್ಟು **10** ಗಾಜಿನ ಬಾಟಲಿಗಳು ಸಿಕ್ಕಿರುತ್ತವೆ. ಇವುಗಳ ಒಟ್ಟು ಬೆಲೆ **1300.22/-**ರೂ ಆಗುತ್ತದೆ. ಹಾಗೂ ಆರೋಪಿತನ ಹತ್ತಿರ ಮಧ್ಯಪಾನ ಮಾರಾಟ ಮಾಡಿದ ಹಣ ರೂ**1590/-** ರೂ ನಗದು ಹಣ ಸಿಕ್ಕಿದ್ದು. ಇವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಕಾಲಕ್ಕೆ ಜಪ್ತು ಪಡಿಸಿಕೊಂಡಿರುವದು ತನಿಖೆಯಿಂದ ಧೃಡಪಟ್ಟು. ಆರೋಪಿತನ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ**32** ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವುದು ಅಪರಾಧವಾಗಿರುತ್ತದೆ.

10) ತನ್ನ ಪ್ರಕರಣವನ್ನು ಸಾಬೀತುಪಡಿಸಲು ಅಭಿಯೋಜನೆಯು ತನ್ನ ಪರವಾಗಿ ಫ್ರಾಸಾ-1 ರಿಂದ ಫ್ರಾಸಾ-05 ಅಂತಾ, ವಿಚಾರಣೆ ಮಾಡಿ ಮತ್ತು ನಿಪಿ1 ರಿಂದ 5 ಹಾಗೂ ಮುದ್ದೆ ಮಾಲು-1 ನೇದ್ದನ್ನು ಗುರುತಿಸಿಕೊಂಡಿರುತ್ತಾರೆ.

11) ಚಾಸಾ2 ರವರನ್ನು ಫ್ರಾಸಾ.1 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ.04-07-2017 ರಂದು ರವರು ಠಾಣೆಯಲ್ಲಿದ್ದಾಗ ಚಾಸಾ-11 ರವರಿಗೆ ಬಂದ ಮಾಹಿತಿ ಮೇರೆಗೆ ಹೊಳಲು ಠಾಣೆಗೆ ಬಂದು ಹೊಳಲು ಗ್ರಾಮದ ಗೋಣಿ ಬಸವೇಶ್ವರ ದೇವಸ್ಥಾನದ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಚಾಸಾ-02 ರವರಿಗೆ ಚಾಸಾ-11 ರವರು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದರಿಂದ ಚಾಸಾ-02 ರವರು ಪಂಚರನ್ನಾಗಿ ಚಾಸಾ-08 ಮತ್ತು 09 ರವರನ್ನು ಕರೆದುಕೊಂಡು ಬಂದಿರುತ್ತಾರೆ. ಸಮಯ ಮಧ್ಯಾಹ್ನ 03.10 ಗಂಟೆಗೆ ಖಾಸಗಿ ವಾಹನದಲ್ಲಿ ಪಂಚರ ಸಮಕ್ಷಮ ತಾನು ಮತ್ತು ಚಾಸಾ-11, ಚಾಸಾ-2 ರಿಂದ 5 ರವರು ಹೊಳಲು ಗ್ರಾಮದ ಗೋಣಿ ಬಸವೇಶ್ವರ ದೇವಸ್ಥಾನದ ಹತ್ತಿರ ಹೋಗಿರುತ್ತೇವೆ. ಸಮಯ ಮಧ್ಯಾಹ್ನ 03.20 ಗಂಟೆಗೆ ಅಲ್ಲಿ ಒಬ್ಬ ವ್ಯಕ್ತಿಯ ಬಳಿಯಿದ್ದ ಒಂದು ರಟ್ಟಿನ ಡಬ್ಬಿಯನ್ನು ಪರಿಶೀಲಿಸಲಾಗಿ 180 ಎಂ.ಎಲ್. ನ 12 ಕೊಡ್ಯಸ್ XXX ರಂಮ್ ನ 12 ಪೌಚುಗಳು ಮತ್ತು 180 ಎಂ.ಎಲ್. ನ ಎ1 ಹೈ ವಿಸ್ಕಿಯ 10 ಬಾಟಲಿಗಳು ಕಂಡು ಬಂದಿರುತ್ತವೆ ಮತ್ತು ಆತನ ಹತ್ತಿರ ನಗದು ಹಣ ರೂ.1,590/- ಗಳು ಸಿಕ್ಕಿರುತ್ತದೆ. ಸಮಯ ಮಧ್ಯಾಹ್ನ 03.30 ರಿಂದ 04.40 ಗಂಟೆಯವರೆಗೆ ಪಂಚರಾದ ಚಾಸಾ-08 ಮತ್ತು 09 ರವರ ಸಮಕ್ಷಮ ಪಂಚನಾಮೆಯನ್ನು

ಜರೂಗಿಸಿ ಮುಗಿಸಿ ನಂತರ ಚಾಸಾ-11 ರವರು ಅರೋಪಿತನನ್ನು ಮತ್ತು ಸಿಕ್ಕ ಮಾಲುಗಳನ್ನು ವಶಪಡಿಸಿಕೊಂಡು ಹಿರೇಹಡಗಲಿ ಪೊಲೀಸ್ ಠಾಣೆಗೆ ಸಂಜೆ 05.00 ಗಂಟೆಗೆ ಕರೆದುಕೊಂಡು ಹೋಗಿರುತ್ತಾರೆ. ಮುಂದಿನ ಕ್ರಮವನ್ನು ಚಾಸಾ-11 ರವರು ಜರೂಗಿಸಿರುತ್ತಾರೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

12). ಫ್ರಾಸಾ 1 ರವರ ತಮ್ಮ ಪಾಟೀಸವಾಲಿನಲ್ಲಿ ರೇಡ್ ಸಮಯದಲ್ಲಿ ಒಟ್ಟು ನಾವು 6 ಜನ ಇದ್ದೇವು, ಮಾದರಿಗಾಗಿ ತೆಗೆದ ಶ್ಯಾಂಪಲ್ ನ್ನು ನಾನು ನೋಡಿಲ್ಲ, ರೇಡ್ ಮಾಡುವ ಸಮಯದಲ್ಲಿ ಯಾವುದೇ ಮಾದರಿ ತೆಗೆದಿರುವುದಿಲ್ಲ, ವಶಪಡಿಸಿಕೊಂಡ ಮುದ್ದೆ ಮಾಲು 19 ರ ನೋಟುಗಳ ಮೌಲ್ಯ ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದು ನುಡಿದಿರುತ್ತಾರೆ.

13) ಚಾಸಾ8 ರವರನ್ನು ಫ್ರಾಸಾ.2 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅರೋಪಿತನ ಪರಿಚಯ ತನಗೆ ಇರುತ್ತದೆ, ಆತನು ತಮ್ಮ ಊರಿನವನು, ತಾನು ಈಗ ನೋಡುತ್ತಿರುವ ದಾಖಲೆ ಮೇಲೆ ಸುಮಾರು 3 ವರ್ಷಗಳ ಹಿಂದೆ ಹಳೆ ಬಸ್ ಸ್ಟ್ಯಾಂಡ್ ನಲ್ಲಿ ಪೋಲೀಸರ ಕೋರಿಕೆಯ ಮೇಲೆ ಸಹಿ ಮಾಡಿರುತ್ತೇನೆ, ಅದರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇಲ್ಲ, ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ, ತನ್ನ ಸಮಕ್ಷಮ ಯಾವುದೇ ಜನ ಪಂಚನಾಮೆಯನ್ನು ಮಾಡಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**14)** ಚಾಸಾ**10** ರವರನ್ನು ಫ್ರಾಸಾ.**3** ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ.**04-07-2017** ರಂದು ಸಂಜೆ **05.00** ಗಂಟೆಗೆ ತಾನು ಠಾಣೆಯ **SHO** ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಚಾ.ಸಾ.**01** ರವರು ಠಾಣೆಗೆ ಹಾಜರಾಗಿ ನೀಡಿ ಜ್ಞಾಪನಾ ದೂರು, ಪಂಚನಾಮೆ ಸ್ವತ್ತು, ಮುದ್ದೆಮಾಲು ಮತ್ತು ಆರೋಪಿಯನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನೆ ನಂ. **126/2017** ರಲ್ಲಿ ಕಲಂ.**32, 34** ಅಬಕಾರಿ ಕಾಯ್ದೆ ಅಡಿ ಪ್ರಕರಣವನ್ನು ದಾಖಲಿಸಿಕೊಂಡು ಅದೇ ದಿನ ನ್ಯಾಯಾಲಯಕ್ಕೆ ಪ್ರ.ವ. ವರದಿಯನ್ನು ಸಲ್ಲಿಸಿರುತ್ತೇನೆ. ನಂತರ ತನಿಖೆಯನ್ನು ಮುಂದುವರೆಸಿ ಅದೇ ದಿನ ಆರೋಪಿತನ ಮೇಲೆ ದಸ್ತಗಿರಿ ಕ್ರಮವನ್ನು ಅನುಸರಿಸಿ ನಂತರ ಆರೋಪಿತನ ಸ್ವಕೃಪಿ ಹೇಳಿಕೆಯನ್ನು ಪಡೆದುಕೊಂಡು ಸೂಕ್ತ ಬೆಂಗಾವಲಿನೊಂದಿಗೆ ಆರೋಪಿತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಚಾಸಾ **1** ರವರು ಜಪ್ತು ಪಡಿಸಿಕೊಂಡ ಮಾಲನ್ನು ಠಾಡ್ತಾ **PF No.82/2017** ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ದಾಳಿಗೆ ಹೋದಂತಹ ಸಿಬ್ಬಂದಿಗಳಾದ ಚಾಸಾ **1, 2,3,4,5** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ದಿನಾಂಕ **02.10.2017** ರಂದು ಸದರಿ ಪ್ರಕರಣದಲ್ಲಿ ಜಪ್ತು ಪಡೆಸಿಕೊಂಡ ಮುದ್ದೆ ಮಾಲನ್ನು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಳ್ಳಲು ಚಾಸಾ **6** ರವರ ಮೂಲಕ ಕಳೆಸಿಕೊಟ್ಟಿರುತ್ತೇನೆ. ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ **11** ರವರಿಗೆ ವರ್ಗಾಯಿಸಿರುತ್ತೇನೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

**15).** ಫ್ರಾಸಾ **3** ರವರ ತಮ್ಮ ಪಾಟೀಸವಾಲಿನಲ್ಲಿ ಎಷ್ಟು ಮುಖ ಬೆಲೆಯ ನೋಟುಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ, ನನ್ನ ತನಿಖಾ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ.

**16)** ಚಾಸಾ**11** ರವರನ್ನು ಫ್ರಾಸಾ.**4** ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ.**04-07-2017** ರಂದು ತಾನು ಮಧ್ಯಾಹ್ನ **03.00** ಗಂಟೆಗೆ ತಮ್ಮ ಠಾಣೆಯ ಉಪಠಾಣೆ ಹೊಳಲು ಗ್ರಾಮದಲ್ಲಿದ್ದಾಗ ಹೊಳಲು ಗ್ರಾಮದ ಗೋಣಿಬಸವೇಶ್ವರ ದೇವಸ್ಥಾನದ ಹತ್ತಿರ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿರುತ್ತದೆ. ನಾನು ಕೂಡಲೇ ಚಾ.ಸಾ.**01** ರಿಂದ **06** ರವರನ್ನು ಕರೆದು ಅವರಿಗೆ ಮಾಹಿತಿಯನ್ನು ತಿಳಿಸಿ ಚಾ.ಸಾ.**02** ರವರಿಗೆ ದಾಳಿಗೆ ಹೋಗಲು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು ಅದರಂತೆ ಚಾ.ಸಾ.**02** ರವರು ಚಾ.ಸಾ.**07** ಮತ್ತು **08** ರವರನ್ನು ಕರೆದುಕೊಂಡು ಬಂದು ತನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆಗ ತನಗೆ ಬಂದ ಮಾಹಿತಿಯನ್ನು ಪಂಚರಿಗೂ ತಿಳಿಸಿ ಪಂಚರಾಗಿ ಸಹಕರಿಸಬೇಕು ಎಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ತಾನು ಮತ್ತು ತಮ್ಮ ಸಿಬ್ಬಂದಿಗಳಾದ ಚಾ.ಸಾ.**01** ರಿಂದ **06** ರವರು ಹಾಗೂ ಪಂಚರು ಸೇರಿ ತಮ್ಮ ಇಲಾಖಾ ವಾಹನದಲ್ಲಿ ಮಧ್ಯಾಹ್ನ **03.10** ಗಂಟೆಗೆ ಠಾಣೆಯಿಂದ ಹೊರಟು **03.20** ಗಂಟೆಗೆ ತಮಗೆ ಮಾಹಿತಿ ಬಂದ ಸ್ಥಳ ಹೊಳಲು ಗ್ರಾಮದ ಗೋಣಿಬಸವೇಶ್ವರ ದೇವಸ್ಥಾನದ ಹತ್ತಿರ ಹೋಗಿರುತ್ತೇವೆ ಸದರಿ ಸ್ಥಳದಲ್ಲಿ ತಮ್ಮ ವಾಹನವನ್ನು ನಿಲ್ಲಿಸಿ ಮರೆಮಾಚಿ ನೋಡಲಾಗಿ ದೇವಸ್ಥಾನದ ಮುಂದೆ ಒಬ್ಬ ವ್ಯಕ್ತಿ ಒಂದು ರಟ್ಟಿನ ಡಬ್ಬಿಯಲ್ಲಿ ಮಧ್ಯ ಮಾರಾಟ ಮಾಡುತ್ತಿರುವುದನ್ನು ಖಚಿತ

ಪಡೆಸಿಕೊಂಡು ಆತನ ಮೇಲೆ ದಾಳಿ ಮಾಡಲಾಗಿ ಆತನ ಹೆಸರು ಗುಜ್ಜಾರ ಸತೀಶ ತಂದೆ ಪಾಡುರಂಗ ಸಾ: ಹೊಳಲು ಎಂದು ತಿಳಿದುಕೊಂಡು ಆತನಿಗೆ ಮಧ್ಯಮಾರಟ ಮಾಡಲು ಪರವಾನಿಗೆ ಕೇಳಲಾಗಿ ಆತನು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದ್ದರಿಂದ ಆತನ ಬಳಿ ಇದ್ದ ರಟ್ಟಿನ ಪೆಟ್ಟಿಗೆಯನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ **180** ಎಮ್.ಎಲ್.ನ ಕೊಡ್ಯಾಸ **XXX** ರಮ್ಮನ **12** ಪೌಚಗಳು ಮತ್ತು **180** ಎಮ್.ಎಲ್.ನ ನಂಬರ **01** ಹೈವರ್ಸ ವಿಸ್ಕಿಯ **10** ಗಾಜಿನ ಬಾಟಲಗಳು ದೊರೆತಿರುತ್ತವೆ ಮತ್ತು ಆತನಿಗೆ ಅಂಗಶೋಧನೆ ಮಾಡಲಾಗಿ ಆತನ ಬಳಿ **1590/-** ನಗದು ಹಣ ಸಿಕ್ಕಿರುತ್ತದೆ. ಸದರಿ ಹಣದ ಬಗ್ಗೆ ವಿಚಾರಿಸಲಾಗಿ ಆತನು ಮಧ್ಯ ಮಾರಾಟ ಮಾಡಿದ್ದರಿಂದ ಬಂದ ಹಣ ಎಂದು ತಿಳಿಸಿದ್ದರಿಂದ ಆತನ ಬಳಿ ದೊರೆತಿದ್ದ ಮಧ್ಯ ಮತ್ತು ಹಣವನ್ನು ಪಂಚರ ಸಮಕ್ಷಮ ಅಮಾನತ್ತು ಪಡೆಸಿಕೊಂಡು ಮಧ್ಯಾಹ್ನ **03.30** ರಿಂದ **04.40** ಗಂಟೆಯವರೆಗೆ ಪಂಚರ ಸಮಕ್ಷಮ ಸ್ಥಳದಲ್ಲಿಯೇ ಪಂಚನಾಮೆ ಜರೂಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇವೆ ಹಾಗೂ ಮಧ್ಯವನ್ನು **SHO** ಅಂತ ಸೀಲು ಮಾಡಿ ರಟ್ಟಿನ ಬಾಕ್ಸನಲ್ಲಿ ಹಾಕಿ ತಮ್ಮ ವಶಕ್ಕೆ ಪಡೆದು ತನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ನಂತರ ಆರೋಪಿ ಮಧ್ಯದ ಪೌಚ ಮತ್ತು ಬಾಟಲಗಳು ನಗದು ಹಣದೊಂದಿಗೆ ಠಾಣೆಗೆ ವಾಪಸ್ಸು ಬಂದು ಆರೋಪಿತನ ವಿರುದ್ಧ ಚಾ.ಸಾ.**10** ರವರಿಗೆ ಬಂದು ದೂರು ದಾಖಲಿಸಿರುತ್ತೇನೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

**17).** ಫ್ರಾಸಾ **4** ರವರ ತಮ್ಮ ಪಾಟೀಸವಾಲಿನಲ್ಲಿ ನಮ್ಮ ಉಪಠಾಣೆಯಿಂದ ಗೋಣಿಬಸವೇಶ್ವರ ದೇವಸ್ಥಾನ ಉತ್ತರ ದಿಕ್ಕಿಗೆ ಇರುತ್ತದೆ, ಆ ದಿನ ಪಂಚರನ್ನು ಒಳಗೊಂಡು ನಾವು ಒಟ್ಟು **07** ಜನ ದಾಳಿ ಮಾಡಲು ಹೋಗಿರುತ್ತೇವೆ,

ಪಂಚನಾಮೆಯಲ್ಲಿ ಗುನ್ನೇ ಸಂಖ್ಯೆ ಬರೆದಿರುವುದಿಲ್ಲ, ಪಂಚನಾಮೆಗೆ ಒಟ್ಟು 3 ಜನ ಮತ್ತು ಬರೆದವರು ಚಾಸಾ.5 ರವರು ಸಹಿ ಮಾಡಿರುತ್ತಾರೆ , ನಾವು ಜಪ್ತು ಮಾಡಿಕೊಂಡಂತಹ ಹಣ ಎಷ್ಟು ಮುಖಬೆಲೆಯ ನೋಟುಗಳು ಎಂದು ಹೇಳಲು ಆಗುವುದಿಲ್ಲ, ದಾಳಿ ಮಾಡುವ ಒಟ್ಟು ಎಷ್ಟು ನೋಟುಗಳು ಇದ್ದವು ಎಂದರೆ ನನಗೆ ಹೇಳಲು ಆಗುವುದಿಲ್ಲ, ಸಮಯದಲ್ಲಿ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ, ಆಗ ನಮ್ಮ ಹತ್ತಿರ ಮೊಬೈಲಗಳು ಇದ್ದವು ಎಂದು ನುಡಿದಿರುತ್ತಾರೆ.

18) ಚಾಸಾ 5 ರವರನ್ನು ಪ್ರಾಸಾ.5 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ.04-07-2017 ರಂದು ಮಧ್ಯಾಹ್ಣ 03.00 ಗಂಟೆ ಸುಮಾರಿಗೆ ತಾನು ಹೊಳಲು ಪೊಲೀಸ್ ಉಪಠಾಣೆಯಲ್ಲಿದ್ದಾಗ ಚಾ.ಸಾ.01 ರವರು ತನಗೆ ಮತ್ತು ಚಾ.ಸಾ.2 ರಿಂದ 04 ರವರನ್ನು ಕರೆದು ಹೊಳಲು ಗ್ರಾಮದ ಗೋಣಿಬಸವೇಶ್ವರ ಗುಡಿಯ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಬಾ ಬಂದಿರುತ್ತದೆ ಎಂದು ತಿಳಿಸಿ ದಾಳಿಗೆ ಹೋಗೋಣ ಎಂದು ತಿಳಿಸಿರುತ್ತಾರೆ. ಆಗ ಚಾ.ಸಾ.02 ರವರಿಗೆ ದಾಳಿಗೆ ಹೋಗಲು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆ. ಅದರಂತೆ ಮಧ್ಯಾಹ್ಣ 03.10 ಗಂಟೆಗೆ ಚಾ.ಸಾ.02 ರವರು ಪಂಚರಾದ ಚಾ.ಸಾ.07 ಮತ್ತು 08 ರವರನ್ನು ಕರೆದುಕೊಂಡು ಬರಲು ಚಾ.ಸಾ.01 ರವರ ಮುಂದೆ ಹಾಜರುಪಡಿಸಿರುತಾತರೆ ಆಗ ಚಾ.ಸಾ.01 ರವರು ಪಂಚರಿಗೆ ಅವರಿಗೆ ಬಂದ ಬಾತ್ಮಿ ವಿಷಯವನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ಆಗ ಚಾ.ಸಾ.01 ರವರೊಂದಿಗೆ ತಾನು ಮತ್ತು ಚಾ.ಸಾ.02 ರಿಂದ 04 ಪಂಚರು ಸೇರಿ ತಮ್ಮ ಇಲಾಖಾ

ವಾಹನದಲ್ಲಿ ಹೊಳಲು ಉಪಠಾಣೆಯಿಂದ ಮಧ್ಯಾಹ್ನ **03.10** ಗಂಟೆಗೆ ಹೊರಟು ಹೊಳಲು ಗ್ರಾಮದ ಗೋಣಿಬಸವೇಶ್ವರ ದೇವಸ್ಥಾನದ ಹತ್ತಿರ **03.20** ಗಂಟೆಗೆ ತಲುಪಿರುತ್ತೇವೆ. ಸದರಿ ಸ್ಥಳದಲ್ಲಿ ನಮ್ಮ ಜೀಪನ್ನು ನಿಲ್ಲಿಸಿ ನಾವು ಕೆಳಗೆ ಇಳಿದು ಮರೆಯಾಗಿ ನೋಡಲಾಗಿ ಸದರಿ ಗ್ರಾಮದ ಗೋಣಿಬಸವೇಶ್ವರ ಗುಡಿಯ ಹತ್ತಿರ ಒಂದು ಶೆಡ್ಡನ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಆಗ ತಾವು ಖಚಿತಪಡೆಸಿಕೊಂಡು ಆತನ ಮೇಲೆ ತಾವುಗಳು ದಾಳಿ ಮಾಡಿರುತ್ತೇವೆ. ಆಗ ಸದರಿ ವ್ಯಕ್ತಿಗೆ ಜಾ,ಸಾ.01 ರವರು ಆ ವ್ಯಕ್ತಿಯ ಹತ್ತಿರ ಹೋಗಿ ವಿಚಾರಿಸಲಾಗಿ ಆತನ ಹೆಸರು ಗುಬ್ಬರ ಸತೀಶ ತಂದೆ ಪಾಡುರಂಗ ಸಾಃ ಹೊಳಲು ಎಂದು ತಿಳಿಸಿರುತ್ತಾರೆ. ಮತ್ತು ಆತನಿಗೆ ಚಾ.ಸಾ.01 ರವರು ಆಗ ಸದರಿ ವ್ಯಕ್ತಿಯನ್ನು ಮಧ್ಯ ಸಾಗಾಣಿಕೆ ಮಾಡಲು ಪರವಾನಿಗೆ ಕೇಳಲಾಗಿ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ. ಆಗ ತಾವುಗಳು ಆತನ ಬಳಿ ಇದ್ದ ಒಂದು ರಟ್ಟಿನ ಡಬ್ಬವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ ಕೊಡೆನ್ XXX 180 ಎಮ್.ಎಲ್.ನ 12 ಪೌಚಗಳು ಮತ್ತು 180 ಎಮ್.ಎಲ್.ನ ನಂಬರ 1 ಹೈವರ್ಡ್ಗ ವಿಸ್ಕೀಯ 10 ಬಾಟಲಗಳು ಇದ್ದವು. ಆಗ ಚಾ.ಸಾ.01 ರವರು ಸದರಿ ವ್ಯಕ್ತಿಗೆ ಅಂಗಶೋಧನೆ ಮಾಡಲಾಗಿ ಆತನ ಅಂಗಿಯ ಜೇಬಿನಲ್ಲಿ 1590/- ನಗದು ಹಣ ದೊರೆತಿರುತ್ತದೆ. ಸದರಿ ಹಣದ ಕುರಿತು ಆ ವ್ಯಕ್ತಿಗೆ ವಿಚಾರಿಸಲಾಗಿ ಆ ಹಣವು ಮಧ್ಯ ಮಾರಾಟದಿಂದ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಆತನ ಬಳಿ ಇದ್ದ ಮಧ್ಯ ಮತ್ತು ಹಣವನ್ನು ಸ್ಥಳದಲ್ಲಿ ಅಮಾನತ್ತು ಪಡೆಸಿಕೊಂಡು ಮಧ್ಯಾಹ್ನ 03.30 ರಿಂದ 04.40 ಗಂಟೆಯವರೆಗೆ ಪಂಚರ ಸಮಕ್ಷಮ ಪಂಚನಾಮೆ ಜರೂಗಿಸಿ ಚಾ.ಸಾ.01 ರವರು ಹೇಳಿದಂತೆ ತನ್ನ ಹಸ್ತಾಕ್ಷರದಿಂದ ಪಂಚನಾಮೆಯನ್ನು ಬರೆದಿರುತ್ತೇನೆ. ನಂತರ

ಚಾ.ಸಾ.01 ಮತ್ತು ಪಂಚರ ಸಮಕ್ಷಮ ಅಮಾನತ್ತು ಪಡೆಸಿಕೊಂಡ ಮಧ್ಯವನ್ನು SHO ಅಂತ ಸೀಲು ಮಾಡಿ ಒಂದು ರಟ್ಟಿನ ಡಬ್ಬದಲ್ಲಿ ಹಾಕಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ತದನಂತರ ಚಾ.ಸಾ.01 ರವರು ಆರೋಪಿ, ಮುದ್ದೆ ಮಾಲು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ವಾಪಸ್ಸು ಬಂದು ಆರೋಪಿತನ ವಿರುದ್ಧ ಚಾ.ಸಾ.11 ರವರ ಮುಂದೆ ದೂರು ದಾಖಲಿಸಿರುತ್ತಾರೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

19). ಪ್ರಾಸಾ 5 ರವರ ತಮ್ಮ ಪಾಟೀಸವಾಲಿನಲ್ಲಿ ಹೊಳಲು ಉಪಠಾಣೆಯಿಂದ ಗೋಣಿಬಸವೇಶ್ವರ ದೇವಸ್ಥಾನ 500 ಮೀಟರ ಒಳಗಡೆ ಇರುತ್ತದೆ ಮತ್ತು ಠಾಣೆಯಿಂದ ಪೂರ್ವಕ್ಕೆ ಇರುತ್ತದೆ, ಶೆಡ್ಡಿನ ಮುಖವು ಪಶ್ಚಿಮ ದಿಕ್ಕಿಗೆ ಇರುತ್ತದೆ, ಇಲಾಖಾ ವಾಹನ ಯಾವುದು ಮತ್ತು ಅದರ ಸಂಖ್ಯೆ ನೆನಪು ಇರುವುದಿಲ್ಲ, ಇಲಾಖಾ ವಾಹನದ ಚಾಲಕ ಯಾರು ಎಂದು ನೆನಪು ಇರುವುದಿಲ್ಲ, ಹಣದ ಎಷ್ಟು ನೋಟು ಇದ್ದವು ಮತ್ತು ಯಾವ ಮುಖಬೆಲೆಯ ನೋಟು ಇದ್ದವು ಎಂದು ಹೇಳಲು ಆಗುವುದಿಲ್ಲ. ಮು.ಮಾ.1 ರಿಂದ 19 ರಂತಹ ಮಾಲುಗಳು ಹೊರಗಡೆ ಸಾಕಷ್ಟು ಸಿಗುತ್ತವೆ ಎಂದರೆ ಇರಬಹುದು, ಚಾ.ಸಾ.07 ರವರ ಸಹಿಯನ್ನು ಮೊದಲು ಪಡೆದಿರುತ್ತೇವೆ, ಆ ದಿನ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ ಎಂದು ನುಡಿದಿರುತ್ತಾರೆ.

20). ಪ್ರಾಸಾ 1,4 ಮತ್ತು 5 ರವರು ತಮ್ಮ ಸಾಕ್ಷ್ಯದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿ ಆರೋಪಿತನ ಬಳಿ ಇದ್ದ ಮಾಲನ್ನು ಮತ್ತು ಹಣವನ್ನು ಜಪ್ತು ಪಡಿಸಿಕೊಂಡಿರುತ್ತೇವೆ ಎಂದು ನುಡಿದಿದ್ದು, ಆದರೆ ಪಂಚರಾದಂತಹ ಪ್ರಾಸಾ

2 ರವರು ಸುಮಾರು 3 ವರ್ಷಗಳ ಹಿಂದೆ ಹಳೆ ಬಸ್ ಸ್ಟಾಂಡಿನಲ್ಲಿ ಠಾಣೆಯಲ್ಲಿ ಪೋಲೀಸರ ಕೋರಿಕೆಯ ಮೇಲೆ 01 ದಾಖಲೆಗೆ ಸಹಿ ಮಾಡಿರುತ್ತೇನೆ, ಅದರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇಲ್ಲ, ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ, ತನ್ನ ಸಮಕ್ಷಮ ಯಾವುದೇ ಜಪ್ತು ಪಂಚೆನಾಮೆಯನ್ನು ಮಾಡಿಲ್ಲವೆಂದು ನುದಿಡಿದ್ದರಿಂದ ಫ್ರಾಸಾ1 ರವರು ಪಂಚರ ಸಮಕ್ಷಮ ಜಪ್ತು ಕಾರ್ಯ ಮಾಡಿರುವುದಿಲ್ಲ ಎಂದು ಕಂಡು ಬಂದಿರುತ್ತದೆ, ಹೀಗಾಗಿ ಫ್ರಾಸಾ 1,4 ಮತ್ತು 5 ರವರ ಸಾಕ್ಷ್ಯದ ಮೇಲೆ ನಂಬಿಕೆ ಮೂಡಿರುವುದಿಲ್ಲ ಹಾಗೂ ಅವರು ಮಾಡಿದ ಜಪ್ತು ಕಾರ್ಯವು ಕಾನೂನು ಬಾಹಿರವಾಗಿರುತ್ತದೆ. ಫ್ರಾಸಾ1 ರವರು ದಾಳಿಗಾಗಿ 6 ಜನ ಹೋಗಿರುತ್ತೇವೆ ಎಂದು ನುಡಿದಿದ್ದರೆ ಫ್ರಾಸಾ4 ರವರು ದಾಳಿಗಾಗಿ ಒಟ್ಟು 7 ಜನ ಹೋಗಿರುತ್ತೇವೆ ಎಂದು ನುಡಿದಿದ್ದು, ಫ್ರಾಸಾ1 ರವರು ಎಷ್ಟು ನೋಟುಗಳನ್ನು ಆರೋಪಿತನ ಕಡೆಯಿಂದ ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ಪಂಚನಾಮೆಯಲ್ಲಿ ನಮೂದು ಮಾಡಿರುವುದಿಲ್ಲ, ಫ್ರಾಸಾ 4 ರವರು ಅವರ ಉಪ ಠಾಣೆಯಿಂದ ಗೋಣಿ ಬಸವೇಶವ್ವರ ದೇವಸ್ಥಾನ ಉತ್ತರ ದಿಕ್ಕಿಗೆ ಇರುತ್ತದೆ ಎಂದು ನುಡಿದಿರೆ ಫ್ರಾಸಾ 5 ರವರು ಅವರ ಉಪ ಠಾಣೆಯಿಂದ ಗೋಣಿಬಸವೇಶವ್ವರ ದೇವಸ್ಥಾನ ಪೂರ್ವ ದಿಕ್ಕಿಗೆ ಇರುತ್ತದೆ ಎಂದು ನುಡಿದಿರುತ್ತಾರೆ, ಫ್ರಾಸಾ 1,4 ಮತ್ತು 5 ರವರು ಆ ದಿನ ದಾಳಿ ಮಾಡಿದವರು ಆಗಿದ್ದು ಎಷ್ಟು ಮುಖ ಬೆಲೆಯ ನೋಟುಗಳನ್ನು ಆರೋಪಿತನ ಕಡೆಯಿಂದ ಜಪ್ತು ಪಡೆಸಿಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ, ಒಟ್ಟು ಎಷ್ಟು ನೋಟುಗಳು ಆರೋಪಿತನ ಕಡೆಯಿಂದ ವಶಪಡಿಸಿಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ ಎಂದು ನುಡಿದಿದ್ದು ಮತ್ತು ಫ್ರಾಸಾ 1,4 ಮತ್ತು 5 ರವರ ಹತ್ತಿರ ಮೊಬೈಲ್ ಪೋನುಗಳು ಇದ್ದರು ಸಹ ದಾಳಿ ಮಾಡುವ

ಸಮಯದಲ್ಲಿ ಮುದ್ದೆ ಮಾಲನ್ನು ಜಪ್ತು ಮಾಡುವಾಗ ಪೋಟೋ ಅಥವಾ ವಿಡಿಯೋಗಳನ್ನು ಸೆರೆಹಿಡಿದಿರುವುದಿಲ್ಲ ಮತ್ತು ಮುದ್ದೆ ಮಾಲುಗಳಂತಹ ಟೇಟ್ರಾ ಪ್ಯಾಕ್ಗಳು ಹೊರಡಗೆ ಸಾಕಷ್ಟು ಸಿಗುತ್ತವೆ ಎಂದರೆ ಸರಿ ಎಂದು ಹೇಳುವ ಮುಖಾಂತರ ಅವರು ಮುದ್ದೆ ಮಾಲನ್ನು ಕೃತ್ಯ ನಡೆದ ಸ್ಥಳದಿಂದ ಜಪ್ತು ಮಾಡಿರುತ್ತಾರೆ ಎಂಬುದನ್ನು ನಂಬಲು ಆಗುವುದಿಲ್ಲ, ಇದರಿಂದಾಗಿ ಫ್ರಾಸಾ 1 ರವರು ಮಾಡಿದ ಜಪ್ತು ಕಾರ್ಯದ ಮೇಲೆ ಅನುಮಾನ ಮೂಡಿರುತ್ತದೆ. ಈ ಪ್ರಕರಣದ ಜಪ್ತು ಕಾರ್ಯವು ನಿಜವಾಗಲು ನಡೆದಿರುತ್ತದೆಯೇ ಎಂಬ ಅನುಮಾನ ಮೂಡಿಸಿರುತ್ತದೆ.

21). ಫ್ರಾಸಾ 3 ರವರು ತನಿಖಾಧಿಕಾರಿಯಾಗಿದ್ದು, ಎಷ್ಟು ಮುಖ ಬೆಲೆಯ ನೋಟುಗಳನ್ನು ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ ಎಂದು ನುಡಿದಿದ್ದು, ತನಿಖೆಯಲ್ಲಿ ಸಾರ್ವಜನಿಕರ ಹೇಳಿಕೆಯನ್ನು ಪಡೆಯುವ ಪ್ರಯತ್ನವನ್ನು ಮಾಡಿರುವುದಿಲ್ಲ. ಪ್ರಕರಣದಲ್ಲಿ ಹೇಳಿರುವ ಹಾಗೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಮದ್ಯವನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿದ್ದನು ಎಂದು ಸಾಬೀತು ಮಾಡಲು ಸಾರ್ವಜನಿಕ ಸ್ಥಳದ ಬಗ್ಗೆ ಯಾವುದೇ ದಾಖಲೆಗಳನ್ನು ಈ ಪ್ರರಣದಲ್ಲಿ ಸಲ್ಲಿಸಿರುವುದಿಲ್ಲ ಹಾಗೂ ನ್ಯಾಯಾಲಯದ ಮುಂದೆ ಕೇವಲ ಖಾಲಿ ಮದ್ಯದ ಪೌಚುಗಳು ಮತ್ತು ಬಾಟಲುಗಳು ಇದ್ದು ವಶಪಡಿಸಿಕೊಂಡಂತಹ ಮುದ್ದೆ ಮಾಲುಗಳಲ್ಲಿ ಇರುವ ಮದ್ಯ ಏನು ಆಯಿತು ಎಂದು ಅಂತಿಮ ವರದಿಯಲ್ಲಿ ಹೇಳಿರುವುದಿಲ್ಲ ಇದರಿಂದಾಗಿ ಈ ಪ್ರಕರಣವು ಸಂಪೂರ್ಣವಾಗಿ ಕಟ್ಟು ಕಥೆಯಿಂದ ಕೂಡಿರುತ್ತದೆ ಎಂದು ತಿಳಿದು ಬರುತ್ತದೆ.

22) ಅಭಿಯೋಜನೆಯು ಈ ಪ್ರಕರಣವನ್ನು ಸಾಭೀತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಮೇಲೆ ಚರ್ಚಿಸಲಾದ ಅಂಶಗಳಲ್ಲಿ ಸಾಕಷ್ಟು ಅನುಮಾನಗಳಿದ್ದು ಆರೋಪಿತನೆ ನಿಸ್ಸಂದೇಹವಾಗಿ ಈ ಪ್ರಕರಣದಲ್ಲಿ ಆಪಾಧಿಸಲಾದ ಅಪರಾಧವನ್ನು ಮಾಡಿರುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ದೋಷಾರೋಪಣೆಯನ್ನು ಸಾಭೀತು ಪಡಿಸಲು ವಿಚಾರಣೆ ಮಾಡಿದ ಸ್ವತಂತ್ರ ಸಾಕ್ಷಿಯು ಅಭಿಯೋಜನೆಗೆ ವ್ಯತಿರಿಕ್ತವಾದ ಸಾಕ್ಷ್ಯ ನುಡಿದಿರುತ್ತಾರೆ. ಹಿರೇಹಡಗಲಿ ಪೋಲಿಸ್ ಸಿಬ್ಬಂದಿಗಳ ಸಾಕ್ಷ್ಯದ ಮೇಲೆ ಆರೋಪಿತನ ಮೇಲಿರುವ ಅಪರಾದ ಸಾಭೀತು ಪಡಿಸಲು ಸಾಧ್ಯವಿಲ್ಲ. ಅಭಿಯೋಜನೆಯು ಕೇವಲ ದಾಖಲೆಗಳು ಮತ್ತು ಪೋಲಿಸ್ ಸಿಬ್ಬಂದಿಯ ಸಾಕ್ಷಿಗಳ ಆಧಾರದ ಮೇಲೆ ಪ್ರಕರಣವನ್ನು ಸಾಭೀತು ಪಡಿಸಲು ಪ್ರಯತ್ನಿಸಲಾಗಿರುತ್ತದೆ. ಆದರೆ ಮೇಲೆ ಹೇಳಿದ ಅಂಶಗಳನ್ನು ಸಾಭೀತು ಪಡಿಸಲು ಸ್ವತಂತ್ರ ಸಾಕ್ಷಿಗಳ ಮೌಖಿಕ ಸಾಕ್ಷ್ಯದ ಅವಶ್ಯಕತೆ ಇರುತ್ತದೆ. ಮೇಲಾಗಿ ಪೊಲಿಸ್ ಇಲಾಖೆಯಿಂದ ಕ್ಯಾಮಾರ ಇರುವಂತಹ ಮೊಬೈಲ್ ಪೋನುಗಳನ್ನು ಪೋಲಿಸರಿಗೆ ನೀಡಿರುತ್ತಾರೆ ಅಂತಹ ಕ್ಯಾಮಾರದಿಂದ ದಾಳಿ ಮಾಡಿದಾಗ ದಾಳಿ ಮಾಡಿದ ಸಾಕ್ಷಿಯಾಗಿ ಒಂದು ಛಾಯಾ ಚಿತ್ರವನ್ನು ಸಹ ಚಾಸಾ 1 ಅಥವಾ ಅವರ ಸಿಬ್ಬಂದಿಯಾಗಲಿ ತೆಗೆದಿರುವುದಿಲ್ಲ. ಆರೋಪಿತನ ವಿರುದ್ಧ ಈ ಪ್ರಕರಣದಲ್ಲಿ ಆಪಾಧಿಸಲಾದ ಯಾವುದೇ ಅಪರಾಧ ಮಾಡಿದ ಬಗ್ಗೆ ನಿಸ್ಸಂಶಯುತವಾಗಿ ತನಿಖೆಯಲ್ಲಿ ಕಂಡು ಬಂದಿರುವುದಿಲ್ಲ ಮತ್ತು ತನಿಖೆಯು ದೋಷಾಪೂರಿತವಾಗಿರುತ್ತದೆ ಹಾಗೂ ಅಪರಾಧ ಸಾಭೀತುಪಡಿಸಲು ಅಭಿಯೋಜನೆಗೆ ಸಾಧ್ಯವಾಗದೆ ಇರುವುದರಿಂದ ಸಂಶಯದ ಲಾಭವನ್ನು ಆರೋಪಿತನಿ ಗೆ ನೀಡಿ ಮೇಲಿನ ಅಂಶಗಳಿಗೆ ಈ ಮೂಲಕ ನಕರಾತ್ಮಕವಾದ ಉತ್ತರವನ್ನು ನೀಡಲಾಗಿದೆ.

23) ಅಂಶ 03: ಈ ಮೇಲಿನ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ;

ಆದೇಶ

- ಕಲಂ. 248 (1) ದಂ. ಪ್ರ. ಸಂ. ಅಡಿಯಲ್ಲಿ ಆರೋಪಿತನ ವಿರುದ್ಧ ಕಲಂ.*32* ಮತ್ತು *34* ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿನ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

- ಆರೋಪಿತನ ಹಾಗೂ ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.

- ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ಮು.ಮಾ*01* ಅನುಪಯುಕ್ತ ವಸ್ತು ಆಗಿದ್ದರಿಂದ ಇದನ್ನು ಅಫಿಲು ಅವದಿ ಮುಗಿದ ನಂತರ ಅವುಗಳನ್ನು ನಾಶಪಡಿಸಲು ಅದೇಶಿಸಿಸಲಾಗಿದೆ. ಮು.ಮಾ *02* ನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಲು ಆದೇಸಲಾಗಿದೆ.

(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚಾದ ನಂತರ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 24.3.2026 ರಂದು ಘೋಷಿಸಲಾಯಿತು.)

(ಶ್ರೀಮತಿ.ಅಕ್ಷತಾ.ಟಿ)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹಡಗಲಿ.

# ಅನುಬಂಧ

## ಅಭಿಯೋಜನಾ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:

ಪ್ರಾಸಾ-1 : ವೀರಶೇಖರ
ಪ್ರಾಸಾ-2 : ಚೌಟಗಿ ಪ್ರಕಾಶ್
ಪ್ರಾಸಾ-3 : ಯು. ದಾದಾಪೀರ
ಪ್ರಾಸಾ-4 : ರಾಮಣ್ಣನಾಯ್ಕ
ಪ್ರಾಸಾ-5 : ಲಕ್ಷ್ಮಣ ಕಾಂಬಳೆ

## ಅಭಿಯೋಜನಾ ಪರ ಗುರ್ತಿಸಿದ ದಾಖಲೆಗಳ ಪಟ್ಟಿ:

ನಿ.ಪಿ.1 : ಪಂಚನಾಮೆ
ನಿ.ಪಿ.2 : ಪ್ರಥಮ ವರ್ತಮಾನ ವರದಿ
ನಿ.ಪಿ.3 : ದೂರು
ನಿ.ಪಿ.4 : ಕಚ್ಚಾ ನಕಾಶೆ
ನಿ.ಪಿ.5 : ರಾಸಾಯನಿಕ ವರದಿ

ಆರೋಪಿತನ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ ಮತ್ತು ದಾಖಲೆಗಳ ಪಟ್ಟಿ:
-- ಇರುವುದಿಲ್ಲ--
ಆರೋಪಿತನ ಪರ ನಿಶಾನೆಗೊಳಿಸಲ್ಪಟ್ಟ ದಸ್ತಾವೇಜಗಳ ಯಾದಿ
**M.O.No.1: 180** ಎಂ.ಎಲ್ದ **12** ಪೌಚ್‌ಗಳು
**M.O.No.2: 180** ಎಂ.ಎಲ್ದ **10** ಗಾಜಿನ ಬಾಟಲಿಗಳು
**M.O.No.3: 1590** ನಗದು ಹಣ

**(ಶ್ರೀಮತಿ. ಅಕ್ಷತಾ. ಟಿ)**
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹಡಗಲಿ.